<u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ::ಚಾಮರಾಜನಗರ ವಿಭಾಗ::ಚಾಮರಾಜನಗರ</u>

ಸಂ/ಕರಾಸಾ/ಚಾನವಿ/ಸಂ/ವಾ/560/2022-23 ದಿನಾಂಕ:14 .06.2022

<u>ಇ-ಟೆಂಡರ್ ಸಂಖ್ಯೆ: 02 /2022-23</u>

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಟಿ.ನರಸೀಪುರ, ಗುಂಡ್ಲುಪೇಟೆ, ತೆರಕಣಾಂಬಿ, ಪಣ್ಯದಹುಂಡಿ, ಹುಲ್ಲಹಳ್ಳಿ, ಸುತ್ತೂರು, ನಂಜನಗೂಡು ನೂತನ ಮತ್ತು ಹಳೆ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ ಮತ್ತು ತೆರೆದ ಸ್ಥಳಗಳಿಗೆ ಮಳಿಗೆ ನಡೆಸಲು ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಪರವಾನಗಿಯನ್ನು ಇ-ಟೆಂಡರ್ ಮತ್ತು ಮ್ಯಾನ್ಯುವಲ್ ಟೆಂಡರ್ ಹಾಗೂ ಸಂಧಾನದ ಮುಖಾಂತರ ನೀಡಲಾಗುವುದು.

<u>ಇ-ಟೆಂಡರ್‌ಗೆ ಒಳಪಡುವ ಮಳಿಗೆ/ತೆರದ ಸ್ಥಳದ ವಿವರ</u>

| ಕ್ರ. ಸಂ | ಬಸ್ ನಿಲ್ದಾಣ | ಮಳಿಗೆ ಸಂಖ್ಯೆ | ವಿಸ್ತೀರ್ಣ (ಅಂದಾಜು ಚದರ ಅಡಿಗಳಲ್ಲಿ) | ಮಳಿಗೆಯ ಮಾಸಿಕ ಪರವಾನಗಿ ಶುಲ್ಕ | ಡಿ.ಡಿ.ಮೂಲಕ ಕಛೇರಿಯಲ್ಲಿ ಸಲ್ಲಿಸ ಬೇಕಾದ ಇ.ಎಂ.ಡಿ. ಮೊತ್ತರೂ | ಇ-ಪ್ರಕ್ಯೂರ್ ಮೆಂಟ್ ಮೂಲಕ ಸಲ್ಲಿಸ ಬೇಕಾದ ಇ.ಎಂ.ಡಿ. ಮೊತ್ತರೂ. | ಮೀಸಲಾತಿ | ಅರ್ಜಿ ಶುಲ್ಕ (GST ಸೇರಿ) |
|---|---|---|---|---|---|---|---|---|
| 1 | ನಂಜನಗೂಡು ಹಳೆ ನಿಲ್ದಾಣ | ಎ.ಟಿ.ಎಂ ಕೌಂಟರ್ (ತೆರೆದ ಪ್ರದೇಶ) | 100.00 | 13915 | 41245 | 500 | ಸಾಮಾನ್ಯ | 170 |

ಸುತ್ತೋಲೆ ಸಂಖ್ಯೆ : 809/2021 ರ ಅನುಸಾರ ಮ್ಯಾನ್ಯುವಲ್ ಅಥವಾ ನೇರವಾಗಿ ಟೆಂಡರ್ ಕಂ ಹರಾಜು ಮೂಲಕ ನೀಡಲಾಗುವ ಮಳಿಗೆ/ತೆರದ ಸ್ಥಳದ ವಿವರ

| ಕ್ರ. ಸಂ | ಬಸ್ ನಿಲ್ದಾಣ | ಮಳಿಗೆ ಸಂಖ್ಯೆ | ವಿಸ್ತೀರ್ಣ (ಅಂದಾಜು ಚದರ ಅಡಿಗಳಲ್ಲಿ) | ಮಳಿಗೆಯ ಮಾಸಿಕ ಪರವಾನಗಿ ಶುಲ್ಕ | ಡಿ.ಡಿ.ಮೂಲಕ ಕಛೇರಿಯಲ್ಲಿ ಸಲ್ಲಿಸ ಬೇಕಾದ ಇ.ಎಂ.ಡಿ. ಮೊತ್ತರೂ | ಮೀಸಲಾತಿ | ಅರ್ಜಿ ಶುಲ್ಕ (GST ಸೇರಿ) |
|---|---|---|---|---|---|---|---|
| 1 | ನಂಜನಗೂಡು ನೂತನ | ಮಳಿಗೆ ಸಂಖ್ಯೆ-01 | 105.00 | 6116 | 18348 | ಸಾಮಾನ್ಯ | 120 |
| 2 | ತೆರಕಣಾಂಬಿ | ಮಳಿಗೆ ಸಂಖ್ಯೆ-01 | 137.47 | 1867 | 5601 | ಸಾಮಾನ್ಯ | 120 |
| 3 | ತೆರಕಣಾಂಬಿ | ಉಪಾಹಾರ ಗೃಹ | 288.82 | 2667 | 8001 | ಸಾಮಾನ್ಯ | 120 |
| 4 | ಪಣ್ಯದಹುಂಡಿ | ಮಳಿಗೆ ಸಂಖ್ಯೆ-02 | 72.00 | 2600 | 7800 | ಸಾಮಾನ್ಯ | 120 |

ಸುತ್ತೋಲೆ ಸಂಖ್ಯೆ : 809/2021 ರ ಅನುಸಾರ ಪರವಾನಗಿ ಶುಲ್ಕ ನಿಗದಿಪಡಿಸದೇ ನೇರವಾಗಿ ಸಂಧಾನದ ಮೂಲಕ ನೀಡಲಾಗುವ ಮಳಿಗೆ/ತೆರದ ಸ್ಥಳದ ವಿವರ

| ಕ್ರ. ಸಂ | ಬಸ್ ನಿಲ್ದಾಣ | ಮಳಿಗೆ ಸಂಖ್ಯೆ | ವಿಸ್ತೀರ್ಣ (ಅಂದಾಜು ಚದರ ಅಡಿಗಳಲ್ಲಿ) | ಮಳಿಗೆಯ ಮಾಸಿಕ ಪರವಾನಗಿ ಶುಲ್ಕ | ಡಿ.ಡಿ.ಮೂಲಕ ಕಛೇರಿಯಲ್ಲಿ ಸಲ್ಲಿಸ ಬೇಕಾದ ಇ.ಎಂ.ಡಿ. ಮೊತ್ತರೂ | ಮೀಸಲಾತಿ | ಅರ್ಜಿ ಶುಲ್ಕ (GST ಸೇರಿ) |
|---|---|---|---|---|---|---|---|
| 1 | ಚಾಮರಾಜನಗರ | ಮಳಿಗೆ ಸಂಖ್ಯೆ -06 | 132.68 | ಅರ್ಜಿದಾರರೇ ನಮೂದಿಸುವುದು | 26400 | ಸಾಮಾನ್ಯ | 110 |
| 2 | ಚಾಮರಾಜನಗರ | ಮಳಿಗೆ ಸಂಖ್ಯೆ -08 | 132.68 | ಅರ್ಜಿದಾರರೇ ನಮೂದಿಸುವುದು | 21780 | ಸಾಮಾನ್ಯ | 110 |
| 3 | ಟಿ.ನರಸೀಪುರ | ಮಳಿಗೆ-02 | 223.48 | ಅರ್ಜಿದಾರರೇ ನಮೂದಿಸುವುದು | 41250 | ಸಾಮಾನ್ಯ | 170 |
| 4 | ಟಿ.ನರಸೀಪುರ | ಮಳಿಗೆ ಸಂಖ್ಯೆ-05 | 85.86 | ಅರ್ಜಿದಾರರೇ ನಮೂದಿಸುವುದು | 32400 | ಸಾಮಾನ್ಯ | 130 |
| 5 | ಗುಂಡ್ಲುಪೇಟೆ | ಮಳಿಗೆ ಸಂಖ್ಯೆ-02 | 109.00 | ಅರ್ಜಿದಾರರೇ ನಮೂದಿಸುವುದು | 36231 | ಸಾಮಾನ್ಯ | 150 |
| 6 | ಗುಂಡ್ಲುಪೇಟೆ | ಮಳಿಗೆ ಸಂಖ್ಯೆ -04 | 34.00 | ಅರ್ಜಿದಾರರೇ ನಮೂದಿಸುವುದು | 53148 | ಸಾಮಾನ್ಯ | 210 |
| 7 | ಗುಂಡ್ಲುಪೇಟೆ | ಮಳಿಗೆ -12(ಮೊದಲನೇ ಮಹಡಿ) | 319.50 | ಅರ್ಜಿದಾರರೇ ನಮೂದಿಸುವುದು | 15090 | ಸಾಮಾನ್ಯ | 120 |
| 8 | ಗುಂಡ್ಲುಪೇಟೆ | ಮಳಿಗೆ -13 (ಮೊದಲನೇ ಮಹಡಿ) | 458.79 | ಅರ್ಜಿದಾರರೇ ನಮೂದಿಸುವುದು | 18237 | ಸಾಮಾನ್ಯ | 120 |
| 9 | ಗುಂಡ್ಲುಪೇಟೆ | ಮಳಿಗೆ -15 (ಮೊದಲನೇ ಮಹಡಿ) | 1516.00 | ಅರ್ಜಿದಾರರೇ ನಮೂದಿಸುವುದು | 25932 | ಸಾಮಾನ್ಯ | 120 |
| 10 | ನಂಜನಗೂಡು ನೂತನ | ಮಳಿಗೆ-03 | 192.50 | ಅರ್ಜಿದಾರರೇ ನಮೂದಿಸುವುದು | 20100 | ಸಾಮಾನ್ಯ | 120 |
| 11 | ನಂಜನಗೂಡು ನೂತನ | ಮಳಿಗೆ-04 | 198.00 | ಅರ್ಜಿದಾರರೇ ನಮೂದಿಸುವುದು | 20082 | ಸಾಮಾನ್ಯ | 120 |
| 12 | ನಂಜನಗೂಡು ನೂತನ | ರಿಫ್ರೆಶ್‌ಮೆಂಟ್ ರೂಮ್ -07 | 2873.94 | ಅರ್ಜಿದಾರರೇ ನಮೂದಿಸುವುದು | 291669 | ಸಾಮಾನ್ಯ | 1150 |
| 13 | ನಂಜನಗೂಡು ನೂತನ | ಮಳಿಗೆ-09 | 2041.06 | ಅರ್ಜಿದಾರರೇ ನಮೂದಿಸುವುದು | 207141 | ಸಾಮಾನ್ಯ | 820 |
| 14 | ಸುತ್ತೂರು | ಮಳಿಗೆ ಸಂಖ್ಯೆ -04 | 224.93 | ಅರ್ಜಿದಾರರೇ ನಮೂದಿಸುವುದು | 17175 | ಸಾಮಾನ್ಯ | 120 |
| 15 | ಸುತ್ತೂರು | ಉಪಾಹಾರ ಗೃಹ | 623.67 | 10000 | 30000 | ಸಾಮಾನ್ಯ | 120 |
| 16 | ಹುಲ್ಲಹಳ್ಳಿ | ಉಪಾಹಾರ ಗೃಹ | 525.49 | ಅರ್ಜಿದಾರರೇ ನಮೂದಿಸುವುದು | 29700 | ಸಾಮಾನ್ಯ | 120 |

Scanned with CamScanner

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಬಸ್ ನಿಲ್ದಾಣಗಳ ತೆರೆದ ಜಾಗದ ಸ್ಥಳಗಳಲ್ಲಿ ಖಾಲಿ ಇರುವ ಹೋರ್ಡಿಂಗ್ಸ್ ಜಾಹಿರಾತುಗಳನ್ನು ನಿಗಮದ ನಿಯಮಾವಳಿಗನ್ವಯ ಪ್ರದರ್ಶಿಸಲು ಸಂಧಾನ ಪ್ರಕ್ರಿಯೆಯ ಮೂಲಕ ಅವಶ್ಯಕ ದಾಖಲಾತಿಗಳೊಂದಿಗೆ ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗಧಿಪಡಿಸಿರುವ ಹೋರ್ಡಿಂಗ್ಸ್ ಜಾಹಿರಾತುಗಳ ವಿವರ (ಹೊರ ಆವರಣ)

| ಕ್ರ.ಸಂ | ಪ್ಯಾಕೇಜ್‌ಗಳ ಸಂಖ್ಯೆ | ವಿಸ್ತೀರ್ಣದ ವಿವರ | ಬಸ್ ನಿಲ್ದಾಣ /ಘಟಕ | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ದರ ಚ.ಅಡಿ ಗಳಲ್ಲಿ | ಮಾಸಿಕ ಮಿತವ್ಯಯ ಶುಲ್ಕ ರೂ.ಗಳಲ್ಲಿ | ಡಿ.ಡಿ. ಮೂಲಕ ಕಛೇರಿಯಲ್ಲಿ ಸಲ್ಲಿಸ ಬೇಕಾದ ಇ.ಎಂ.ಡಿ. , ಮೊತ್ತ.ರೂ | ಅರ್ಜಿ ಶುಲ್ಕ (ಜಿ.ಎಸ್.ಟಿ ಸೇರಿ) |
|---|---|---|---|---|---|---|---|---|---|
| 1 | 1 | 20•10 ಚ.ಅಡಿಗಳು | ಚಾಮರಾಜನಗರ ಬಸ್ ನಿಲ್ದಾಣ | 3 | 600 | 7 | 4200 | 12600 | 120 |
| 2 | 1 | 20•10 ಚ.ಅಡಿಗಳು | ಗುಂಡ್ಲುಪೇಟೆ ಬಸ್ ನಿಲ್ದಾಣ | 3 | 600 | 5 | 3000 | 9000 | 120 |
| 3 | 1 | 20•10 ಚ.ಅಡಿಗಳು | ನಂಜನಗೂಡು ಬಸ್ ನಿಲ್ದಾಣ | 2 | 400 | 5 | 2000 | 6000 | 120 |

ಇ-ಟೆಂಡರ್/ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು http://eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಷರತ್ತುಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

ಇ-ಟೆಂಡರ್ ಮತ್ತು ಮ್ಯಾನ್ಯುವಲ್ ಟೆಂಡರ್-ಕಂ-ಹರಾಜು ಹಾಗೂ ಸಂಧಾನ ಅರ್ಜಿಗಳನ್ನು ಪುರಸ್ಕರಿಸುವ/ತಿರಸ್ಕರಿಸುವ/ಮಾರ್ಪಾಡು ಮಾಡುವ/ರದ್ದುಪಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಇ-ಟೆಂಡರ್‌ನಲ್ಲಿ ಅರ್ಜಿದಾರರು ಒಟ್ಟು ಇ.ಎಂ.ಡಿ. ಮೊತ್ತದಲ್ಲಿ ರೂ.500/- ಅನ್ನು ಇ-ಪೇಮೆಂಟ್ ಮೂಲಕ ಮತ್ತು ಉಳಿದ ಇ.ಎಂ.ಡಿ ಮೊತ್ತಕ್ಕೆ (ರಾಷ್ಟ್ರೀಕೃತ ಬ್ಯಾಂಕ್)ನಲ್ಲಿ "Divisional Controller, K.S.R.T.C. Chamarajnagar Division" ರವರ ಹೆಸರಿನಲ್ಲಿ ಡಿ.ಡಿ ಪಡೆದು ಸ್ಕ್ಯಾನ್ ಮಾಡಿ, ಅರ್ಜಿ ಶುಲ್ಕದ ಡಿ.ಡಿ ಅನ್ನು ಸ್ಕ್ಯಾನ್ ಮಾಡಿ ಎರಡೂ ಡಿ.ಡಿ.ಗಳನ್ನು ಇತರೆ ದಾಖಲಾತಿಗಳೊಂದಿಗೆ ಇ-ಪೋರ್ಟಲ್‌ನಲ್ಲಿ ಅಪಲೋಡ್ ಮಾಡುವುದು ಹಾಗೂ ಡಿ.ಡಿ.ಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸುವುದು.

ಮ್ಯಾನ್ಯುವಲ್ ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸುವ ಆಸಕ್ತದಾರರು ಪ್ರತ್ಯೇಕ ಮಳಿಗೆಗಳಿಗೆ ನಿಗದಿತ ಪ್ರತ್ಯೇಕ ಇ.ಎಂ.ಡಿ.ಗಳನ್ನು (ರಾಷ್ಟ್ರೀಕೃತ ಬ್ಯಾಂಕ್)ನಲ್ಲಿ "Divisional Controller, K.S.R.T.C. Chamarajnagar Division" ಪದನಾಮಕ್ಕೆ ಸಂದಾಯವಾಗುವಂತೆ ಪಡೆದು, ಮನವಿ ಪತ್ರದೊಂದಿಗೆ ಆಧಾರ್‌ಕಾರ್ಡ್/ಪಡಿತರ ಚೀಟಿ/ಪಾನ್‌ಕಾರ್ಡ್/ಬ್ಯಾಂಕ್ ಪಾಸ್ ಪುಸ್ತಕ & ಇನ್ನಿತರೆ ದಾಖಲಾತಿಗಳೊಂದಿಗೆ ವಿಭಾಗೀಯ ಕಛೇರಿ, ಚಾಮರಾಜನಗರ ಇಲ್ಲಿ ದಿನಾಂಕ:-07.07.2022 ರಂದು ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ವಿಭಾಗೀಯ ಕಛೇರಿಯಲ್ಲಿ ಇರಿಸಿರುವ ಟೆಂಡರ್ ಪೆಟ್ಟಿಗೆಯಲ್ಲಿ ಹಾಕಬೇಕಾಗಿದ್ದು, ತದನಂತರ 12.30 ಗಂಟೆಗೆ ಬಾಕ್ಸ್ ತೆರೆದು ಮ್ಯಾನ್ಯುವಲ್ ಟೆಂಡರ್ ಕಂ ಹರಾಜು ನಡೆಸಲಾಗುವುದು.

ಸಂಧಾನದಲ್ಲಿ ಭಾಗವಹಿಸುವ ಅರ್ಜಿದಾರರು ಕೊನೆಯ ದಿನಾಂಕದೊಳಗೆ ಅರ್ಜಿ ಶುಲ್ಕ ಸಲ್ಲಿಸಿ, ಅರ್ಜಿ ಪಡೆದು, ಭರ್ತಿಮಾಡಿದ ಅರ್ಜಿ ಹಾಗೂ ಇ.ಎಂ.ಡಿ ಮೊತ್ತದ ಡಿ.ಡಿ.ಗಳನ್ನು ಆಧಾರ್ ಕಾರ್ಡ್, ಪಾನ್‌ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ & ಇನ್ನಿತರೆ ದಾಖಲಾತಿಗಳೊಂದಿಗೆ ಅರ್ಜಿಯನ್ನು ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಿ, ಸಂಧಾನ ಸಭೆಯಲ್ಲಿ ಭಾಗವಹಿಸಿ ಪರವಾನಗಿ ಪಡೆಯಬಹುದಾಗಿದೆ.

ಇ-ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸ ಬೇಕಾದ ಇ.ಎಂ.ಡಿ ಡಿ.ಡಿ ಮತ್ತು ಅರ್ಜಿ ಶುಲ್ಕದ ಡಿಡಿ ಯನ್ನು ಸ್ವೀಕರಿಸಲು ಕಡೆಯ ದಿನಾಂಕ : 12.07.2022 ಕಛೇರಿ ಸಮಯ

ಇ-ಟೆಂಡರ್ ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 12.07.2022 ಕಛೇರಿ ಸಮಯ

ಇ-ಟೆಂಡರ್ ತೆರೆಯುವ ದಿನಾಂಕ : 14.07.2022 ಸಮಯ : 11:00 ಗಂಟೆ

ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಅರ್ಜಿಗೆ ಸಂಬಂಧಿಸಿದಂತೆ

ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಅರ್ಜಿ ಪಡೆಯಲು ಕೊನೆಯ ದಿನಾಂಕ : 06.07.2022 ಕಛೇರಿ ಸಮಯ

ಸಂಧಾನದ ಅರ್ಜಿ ಮತ್ತು ಇ.ಎಂ.ಡಿ. ಡಿಡಿ ಸಲ್ಲಿಸಲು ಕೊನೆಯ ದಿನಾಂಕ : 06.07.2022 ಕಛೇರಿ ಸಮಯ

ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಸಭೆಯ ದಿನಾಂಕ : 07.07.2022 ಸಮಯ ಮಧ್ಯಾಹ್ನ 12.30 ಗಂಟೆ

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ), ಚಾಮರಾಜನಗರ. ರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂರ ವಾಣಿ ಸಂಖ್ಯೆ:-7760990302, 7760990311).

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ಚಾಮರಾಜನಗರ ವಿಭಾಗ::ಚಾಮರಾಜನಗರ

ಪ್ರತಿಯನ್ನು:-ವಂದನಾಪೂರ್ವಕವಾಗಿ:-ನಿರ್ದೇಶಕರು(ಭ & ಜಾ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.

ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:-ವಂದನಾಪೂರ್ವಕವಾಗಿ:-ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ನ.ಸಾ.ಸಂಸ್ಥೆ,/ಕ.ಕ.ರಾ.ಸಾ.ನಿಗಮ,/ ವಾ.ಕ.ರಾ.ಸಾ.ನಿಗಮ ರವರ ಮಾಹಿತಿಗಾಗಿ

ಪ್ರತಿಯನ್ನು:-ವಿಭಾಗೀಯ ಸಂಚಲನಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿ/ ಭದ್ರತಾ ಹಾಗೂ ಜಾಗೃತಾ ಅಧಿಕಾರಿ/ ಕಾನೂನು ಅಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಚಾಮರಾಜನಗರ ವಿಭಾಗ, ಇವರ ಮಾಹಿತಿಗಾಗಿ ಹಾಗೂ ದಿನಾಂಕ:-14.07.2022 ರಂದು 11.00 ಗಂಟೆಗೆ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಹಾಗೂ ದಿನಾಂಕ:07.07.2022 ರಂದು ಮಧ್ಯಾಹ್ನ 12.00 ಗಂಟೆಗೆ ಸಂಧಾನ ಸಭೆಯಲ್ಲಿ ಹಾಜರಾಗಲು ಸೂಚಿಸಲಾಗಿದೆ. ಮತ್ತು ಭದ್ರತಾ ಹಾಗೂ ಜಾಗೃತಾ ಅಧಿಕಾರಿರವರು ದಿನಾಂಕ:07.07.2022 ರಂದು ಬೆಳಿಗ್ಗೆ 10:30 ಮತ್ತು 12:00 ಗಂಟೆಯ ಸಮಯದಲ್ಲಿ ವಿಭಾಗೀಯ ಕಛೇರಿಯಲ್ಲಿ ಹಾಜರಿರುವುದು, ಹಾಗೂ ಸ.ಕಾ.ನಿ.ಅ. ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಟೆಂಡರ್ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.

ಪ್ರತಿಯನ್ನು:-ಎಲ್ಲಾ ಘಟಕ ವ್ಯವಸ್ಥಾಪಕರು, ಚಾಮರಾಜನಗರ ವಿಭಾಗ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಎಲ್ಲರಿಗೂ ಕಾಣುವಂತೆ ತಮ್ಮ ವ್ಯಾಪ್ತಿಯ ಬಸ್ ನಿಲ್ದಾಣಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ಸೂಚಿಸಲಾಗಿದೆ. ಹಾಗೂ ಎಲ್ಲಾ ಆಸಕ್ತದಾರರಿಗೆ ಈ ಬಗ್ಗೆ ತಿಳಿಸುವಂತೆ ಕೋರಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ಚಾಮರಾಜನಗರ ವಿಭಾಗ::ಚಾಮರಾಜನಗರ

Scanned with CamScanner